ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರವಾಸಿ ಮಂದಿರ ಹಾಗೂ ಅತಿಥಿ ಗೃಹಗಳ ಸಂಖ್ಯೆ

೧೧೫೩. ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಪ್ರವಾಸಿ ಮಂದಿರ, ಅತಿಥಿ ಗೃಹಗಳು, ಸರ್ಕ್ಯೂಟ್ ಹೌಸ್‌ಗಳು, ಎಷ್ಟು ? ಅವುಗಳು ಎಲ್ಲೆಲ್ಲಿ ಇವೆ ?

ಆ) ೧೯೮೮–೮೯, ೧೯೮೯–೯೦ರ ಸಾಲಿನಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ, ವೇತನ ಹಾಗೂ ನಿರ್ವಹಣೆಗೆ ವೆಚ್ಚವಾದ ಹಣ ?

ಇ) ಇವುಗಳೆಲ್ಲವೂ ಸುಸೂತ್ರವಾಗಿ ನಡೆಯುತ್ತಿವೆಯೇ, ಇವುಗಳ ಮೇಲ್ವಿಚಾರಣೆ ನೋಡುವವರು ಯಾರು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಒಟ್ಟು ೨೧.

	ಸಂಖ್ಯೆ		
೧) ಸರ್ಕ್ಯೂಟ್ ಹೌಸ್‌ಗಳು	೪	(೧)	ಮಂಗಳೂರಿನ ಕದ್ರಿಗುಡ್ಡ, ಉಡುಪಿ, ಕಾರ್ಕಳ, ಹಾಗೂ ಮೂಡಬಿದ್ರೆ.
೨) ಪ್ರವಾಸಿ ಮಂದಿರಗಳು	೬	(೨)	ಸುಳ್ಯ, ಉಡುಪಿ, ಕುಂದಾಪುರ, ಬೈಂದೂರು.
೩) ನಿರೀಕ್ಷಣಾ ಮಂದಿರಗಳು	೧೧		ಕೊಲ್ಲೂರು ಮತ್ತು ಬೆಳ್ತಂಗಡಿ
೪) ಅತಿಥಿ ಗೃಹಗಳು	೨೧	(೩)	ಮಂಜೇಶ್ವರ (ಮಂಗಳೂರು) ಮಂಜೇಶ್ವರ, ಬಂಟ್ವಾಳ, ಪುತ್ತೂರು, ಕುಲ್ಕುಂದ, ಉಡುಪಿ, ಕುಂದಾಪುರ, ಕೊಲ್ಲೂರು, ಕಾರ್ಕಳ, ಮೂಡಬಿದ್ರೆ ಮತ್ತು ಬೆಳ್ತಂಗಡಿ.

ಆ) ೧೯೮೮–೮೯ ಮತ್ತು ೧೯೮೯–೯೦ನೇ ಸಾಲಿನಲ್ಲಿ ಆದ ವೆಚ್ಚದ ವಿವರಗಳು,

	೧೯೮೮–೮೯	೧೯೮೯–೯೦
೧) ಸಿಬ್ಬಂದಿ ವೇತನ	೨,೫೦,೬೨೧–೬೦	೨,೬೨,೬೬೯–೧೦
೨) ನಿರ್ವಹಣಾ ವೆಚ್ಚ	೫,೯೮,೦೧೧–೮೩	೭,೭೫,೦೧೭–೨೧
ಒಟ್ಟು	೮,೪೮,೬೩೩–೪೩	೧೦,೪೨,೬೮೬–೩೧

ಇ) ಲೋಕೋಪಯೋಗಿ ಇಲಾಖೆಯ ವತಿಯಿಂದ ಎಲ್ಲಾ ಕ್ರಮಗಳು ಸೂಸುತ್ರವಾಗಿ ನಡೆಯುತ್ತಿವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆ ಬೇರೆ ಕಡೆ ಇರುವಂತಹ ಸರ್ಕ್ಯೂಟ್‌ಹೌಸ್, ಪ್ರವಾಸಿ ಮಂದಿರ, ಅತಿಥಿಗೃಹ ಮತ್ತು ನಿರೀಕ್ಷಣಾ ಮಂದಿರಗಳ ವಿವರಗಳನ್ನು ಮಾನ್ಯ ಮಂತ್ರಿಗಳು ನೀಡಿದ್ದಾರೆ, ಖರ್ಚಿನ ವಿವರ ಕೂಡ ಹೇಳಿದ್ದಾರೆ. ಆದರೆ ಹೆಚ್ಚಿನ ಪ್ರವಾಸಿಮಂದಿರ, ಅತಿಥಿಗೃಹಗಳಲ್ಲಿರುವಂತಹ ಸಿಬ್ಬಂದಿಯ ನಡವಳಿಕೆ ಮತ್ತು ಅದನ್ನು ನೋಡಿಕೊಳ್ಳುತಕ್ಕ ರೀತಿ ಸರಿಯಾಗಿಲ್ಲದೆ ತುಂಬ ಜನ ಬೇಸರಪಟ್ಟುಕೊಂಡು ನಮ್ಮ ಹತ್ತಿರ ಅನೇಕರು ದೂರುಗಳನ್ನು ಹೇಳುತ್ತಿದ್ದಾರೆ. ಅಲ್ಲಿ ಒಬ್ಬರು ಇದ್ದರೆ ಒಬ್ಬರು ಇರುವುದಿಲ್ಲ. ಆಹಾರ ಪಾನೀಯಗಳು ಸರಿಯಾಗಿ ಸಿಗುವುದಿಲ್ಲ. ಅಂತಹ ಅವ್ಯವಸ್ಥೆ ಉಂಟು. ಅದನ್ನೆಲ್ಲ ಸರಿಪಡಿಸಲಿಕ್ಕೆ ಸರಿಯಾದಂಥ ಸೂಕ್ತ ನಿರ್ದೇಶನವನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮವಾದಂತಹ ಸಲಹೆ ಕೊಟ್ಟಿದ್ದಾರೆ. ಅಂತಹ ಸಿಬ್ಬಂದಿಯ ಅಭಿಸ್ಥಿನ ಬಗ್ಗೆ ನಿರ್ದಿಷ್ಟ ಪ್ರಕರಣವನ್ನು ತಿಳಿಸಿದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕೂಡ ನಾವು ತಯ್ಯಾರಾಗಿದ್ದೇವೆ. ಇನ್ನು ಮುಂದೆ ಪ್ರವಾಸಿ ಮಂದಿರಕ್ಕೆ ಅತಿಥಿಗೃಹಗಳನ್ನು ಸುಸ್ಥಿತಿಯಲ್ಲಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಹೆಚ್ಚಿನ ಪ್ರವಾಸಿ ಮಂದಿರಗಳು, ಅತಿಥಿಗೃಹಗಳು, ನಿರೀಕ್ಷಣಾ ಮಂದಿರಗಳು ದುರಸ್ಥಿಯಾಗಬೇಕಾಗಿವೆ. ಇರುವಂತಹ ಪ್ರವಾಸಿ ಮಂದಿರ, ಅತಿಥಿ ಗೃಹಗಳು ಅಂದ ಚೆಂದ, ಓರಣ ಸಾರಣ ಕೆಲಸ ಚೆನ್ನಾಗಿಲ್ಲದೆ ಇರತಕ್ಕ ಮಂದಿರಗಳುಂಟು. ಆವುಗಳನ್ನು ಸರಿಯಾಗಿ ಇರುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಒಳ್ಳೆಯ ಸಲಹೆ.

ವಿಭಾಗ ಕಾವಂಗಾರಿಗಾಗಿ ಗುಲ್ಬರ್ಗ ಜಿಲ್ಲೆಗೆ ಹಂಚಿಕೆಯಾದ ಮೊಬಲಗು

೬೫೦. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗ ಜಿಲ್ಲೆಯಲ್ಲಿಯು ಗಡಿ ಪ್ರದೇಶ ರಸ್ತೆಗಳಲ್ಲಿ ಅಭಿವೃದ್ಧಿಗಾಗಿ ನೀಡಲಾದ ರಸ್ತೆ ಮತ್ತು ಸೇತುವೆಗಳಡಿಯಲ್ಲಿ ನೀಡಲಾದ ಅನುದಾನ (ರಸ್ತೆ ಮತ್ತು ಸೇತುವೆಗಳ ಹೆಸರುಗಳ ವಿವರ ಗಳನ್ನು ಒದಗಿಸುವುದು),

ಆ) ಈ ಗಡಿ ಪ್ರದೇಶ ರಸ್ತೆಗಳ ಮೇಲೆ ಮಾಡಲಾದ ಒಟ್ಟು ವೆಚ್ಚ,

ಇ) ಗಡಿ ಪ್ರದೇಶದ ರಸ್ತೆ ಮತ್ತು ಸೇತುವೆಗಳನ್ನು ಆಯ್ಕೆ ಮಾಡಲು ಅಂಗೀಕರಿಸಿದ ಸೂತ್ರಗಳು

ಶ್ರೀ ಜಿ. ಪುಟ್ಟಸ್ವಾಮಿ ಗೌಡ, (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿ ಯವರು).—

ಅ) ಗುಲಬರ್ಗ ಜಿಲ್ಲೆಯಲ್ಲಿಯು ಗಡಿ ಪ್ರದೇಶ ರಸ್ತೆಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಯಾವುದೇ ಅನುದಾನವನ್ನು ರಾಜ್ಯ ಆಯವ್ಯಯದಲ್ಲಿ ನೀಡಿರುವುದಿಲ್ಲ. ಆದರೆ ಹೈದಾರಬಾದ್ ಕರ್ನಾಟಕ ಅಭಿವೃದ್ಧಿಯಡಿಯಲ್ಲಿ ಕೆಳಕಂಡ ಗಡಿ ಪ್ರದೇಶದ ರಸ್ತೆಗಳನ್ನು ೧೯೯೦–೯೧ರ ಸಾಲಿನಲ್ಲಿ ತೆಗೆದು ಕೊಳ್ಳಲಾಗುವುದು.

ರಸ್ತೆ ಹೆಸರು	ಒಟ್ಟು ಅಂದಾಜು ಲಕ್ಷ ರೂ. ಗಳು	ಪ್ರಸ್ತಾಪಿಸಲಾದ ೯೦–೯೧ರಲ್ಲಿ ಅನುದಾನದ ಲಕ್ಷ ರೂ. ಗಳು
೧) ಗುಲ್ಬರ್ಗ ಸೇಡಂ ರಾವಳಪಲ್ಲಿ ರಸ್ತೆ ೮೨ ಕಿ. ಮೀ	೪೩೫–೦೦	೯೨–೫೦
೨) ಸೇಡಂ ಗುರುಮಿಟಕಲ್ ರಸ್ತೆ ೫೦ ಕಿ. ಮೀ	೨೭೦–೦೦	೨೯–೦೦
೩) ಚಿಂಚೋಳಿ–ಕಾಂಡೂರ ರಸ್ತೆ ೧೬ ಕಿ. ಮೀ	೯೬–೦೦	೧೪–೦೦

ಆ) ಈ ಅನುದಾನದಡಿಯಲ್ಲಿ ಯಾವುದೇ ಕಾವಂಗಾರಿಗಳನ್ನು ಇನ್ನೂ ಕೈಕೊಂಡಿಲ್ಲವಾದ್ದರಿಂದ ವೆಚ್ಚ ಇಲ್ಲಾ.

ಇ) ಯಾವುದೇ ಸೂತ್ರಗಳನ್ನು ನಿಗದಿಪಡಿಸಿಲ್ಲ. ಕರ್ನಾಟಕ ರಾಜ್ಯದ ಗಡಿ ಪ್ರದೇಶದಿಂದ ಪಕ್ಕದ ರಾಜ್ಯಗಳಿಗೆ ಸಂಪರ್ಕವಿರುವ ರಸ್ತೆಗಳನ್ನು ಗಡಿ ರಸ್ತೆಗಳೆಂದು ಪರಿಗಣಿಸಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಓದಗಿಸಿದ್ದಾರೆ. ಬಾರ್ಡರ್ ಏರಿಯಾದಲ್ಲಿ ಹೊಸದಾಗಿ ರಸ್ತೆಗಳನ್ನು ಮಾಡುವುದಕ್ಕಾಗಲೀ ಅಥವಾ ರಿಪೇರಿ ಮಾಡುವುದಕ್ಕಾಗಲೀ, ಇಂಪ್ರೂವ್‌ಮೆಂಟ್ ಮಾಡುವುದಕ್ಕಾಗಲೀ ಇರುವ ನಾಮ್ಸ್ ಏನಂ?